**ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ ಪೊನ್ನಂಪೇಟೆ.**

**ಸಿ.ಸಿ.ಸಂಖ್ಯೆ.906/2024**

| | | |
|---|---|---|
| ಫಿರ್ಯಾದುದಾರು | : | ಶ್ರೀ ಅನ್ಸದ್ ಬಿ.ಹೆಚ್,<br>ತಂದೆಃ ಬಿ.ಎಮ್.ಹಮೀದ್,<br>ಪ್ರಾಯಃ 28 ವರ್ಷ,<br>ವಾಸಃ ಹೆಬ್ಬಾಲೆ ಗ್ರಾಮ, ದೇವರಪುರ ಅಂಚೆ,<br>ಪೊನ್ನಂಪೇಟೆ ತಾಲ್ಲೂಕು, ಕೊಡಗು. |
| | | **---ವಿರುದ್ದ –** |
| ಆರೋಪಿ | : | ಶ್ರೀ ಕೆ.ಎಮ್.ಮುಸ್ತಫ್,<br>ತಂದೆಃ ಪೌತಿ ಮೊಯ್ದು,<br>ಪ್ರಾಯಃ 42 ವರ್ಷ,<br>ವಾಸಃ ಕೋಣನಕಟ್ಟೆ, ಮಾಯಮೂಡಿ ಗ್ರಾಮ<br>ಮತ್ತು ಅಂಚೆ, ಪೊನ್ನಂಪೇಟೆ ತಾಲ್ಲೂಕು,<br>ಕೊಡಗು. |

**ಆರೋಪಿಯಾದ ನಿಮ್ಮ ವಿರುದ್ದ ಇರುವ ಆಪಾದನೆ ಏನೆಂದರೆ**

ಆರೋಪಿಯಾದ ನೀವು ಪಿರ್ಯಾದಿದಾರರಾದ ಶ್ರೀ ಅನ್ಸದ್ ಬಿ.ಹೆಚ್, ಅವರಿಂದ ನಿಮ್ಮ ಹಣಕಾಸಿನ ಅಗತ್ಯಕ್ಕಾಗಿ ದಿಃ22.04.2024 ರಂದು ರೂ.4,00,000/- ರೂಪಾಯಿಗಳನ್ನು ಸಾಲವಾಗಿ ಪಡೆದಿದ್ದು, ನಂತರ ಪಿರ್ಯಾದಿದಾರರು ಸಾಲವನ್ನು ಮರುಪಾವತಿಸುಂತೆ ಕೇಳಿದಾಗ ಆರೋಪಿಯಾದ ನೀವು ನಿಮ್ಮ ಬ್ಯಾಂಕ್ ಆಫ್ ಬರೋಡಾ, ಕೋಣನಕಟ್ಟೆ ಶಾಖೆಯ ದಿಃ22.05.2024ರ 000018 ನಂಬರರಿನ ಚೆಕ್ಕನ್ನು ಸಾಲದ ಬಾದ್ಯತೆಗಾಗಿ ನೀಡಿದ್ದು, ನಂತರ ದಿಃ22.05.2024 ರಂದು ಪಿರ್ಯಾದಿದಾರರು ಸದರಿ ಚೆಕ್ ಅನ್ನು ನಗದೀಕರಣಕ್ಕಾಗಿ ಕರ್ನಾಟಕ ಗ್ರಾಮೀಣ ಬ್ಯಾಂಕ್, ದೇವರಪುರ ಶಾಖೆಗೆ ಹಾಜರುಪಡಿಸಿದಾಗ ಸದರಿ ಬ್ಯಾಂಕ್‌ನವರು ದಿಃ01.06.2024 ರಂದು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂದು ಹಿಂಬರಹ ನೀಡಿರುತ್ತಾರೆ. ನಂತರ ಪಿರ್ಯಾದಿದಾರರು ತಮ್ಮ ವಕೀಲರ ಮೂಖಾಂತರ 15 ದಿನಗಳೊಳಗೆ ಚೆಕ್ ಹಣವನ್ನು ಹಿಂದಿರುಗಿಸುವಂತೆ ದಿಃ 10.06.2024 ರಂದು ಕಾನೂನು ರೀತಿಯ ನೋಟಿಸನ್ನು ನೀಡಿದ್ದರು ಸಹ ನೀವು ಚೆಕ್ ಮೊತ್ತವನ್ನು ನಿಗದಿತ ಸಮಯದಲ್ಲಿ ಪಿರ್ಯಾದಿದಾರರಿಗೆ ಕೊಡದೇ ಮೋಸ ಮಾಡಿದ್ದು, ಇದು ವ್ಯವಹರಣೆಯ ಲಿಖಿತಗಳ ಅಧಿನಿಯಮ ಕಲಂ 138

ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವಾಗಿದ್ದು, ಈ ನ್ಯಾಯಾಲಯದ ವಿಚಾರಣಾಧಿಕಾರ ವ್ಯಾಪ್ತಿಯಲ್ಲಿ ಮಾಡಿರುವುದಾಗಿ ಆರೋಪಿಸಲಾಗಿದೆ.

**ಆರೋಪಿಯ ಹೇಳಿಕೆ**

1. ಪ್ರಶ್ನೆ - ಇದೀಗ ಓದಿ ಹೇಳಿದ ಆರೋಪಣೆಯು ನಿಮಗೆ ಅರ್ಥವಾಯಿತೆ ?

ಉತ್ತರಃ ಅರ್ಥವಾಯಿತು

2. ಪ್ರಶ್ನೆ - ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಬಯಸುವಿರಾ?

ಉತ್ತರಃ ತಪ್ಪು ಮಾಡಿಲ್ಲ, ವಿಚಾರಣೆಯಾಗಬೇಕು

(ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ದಿಃ10.07.2025 ರಂದು ಆರೋಪಿಗೆ ನನ್ನ ಸಮಕ್ಷಮ ಓದಿ ಹೇಳಿ ಅವರ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ).

sd/-
ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಲಯ, ಪೊನ್ನಂಪೇಟೆ,